ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರಃ 392/2017
ಡಿ.ಡಬ್ಲ್ಯೂ : 1

ದಿನಾಂಕಃ 19-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು: ವಾದಿ ಪರ ಶ್ರೀ ಎಮ್ ಜೆ ಎಸ್ ವಕೀಲರಿಂದಃ

1. ನಿ.ಡಿ. 1 ರ ದಾಖಲೆಯನ್ನು ನನ್ನ ತಂದೆಯವರು ಟ್ರುಬುನಲ್/ನ್ಯಾಯಮಂಡಳಿನಿಂದ ಪಡೆದಿರುತ್ತಾರೆ. ನನ್ನ ತಂದೆಯವರು ಭೂ ನ್ಯಾಯ ಮಂಡಳಿಯಲ್ಲಿ ಒಟ್ಟು ಎಷ್ಟು ಅರ್ಜಿ ಕೊಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನಿ.ಪಿ.5 ರ ಪ್ರಕಾರ ನನ್ನ ತಂದೆ ಭೂ ನ್ಯಾಯ ಮಂಡಳಿಯ ಮುಂದೆ ಒಂದು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆಯವರು ಭೂ ನ್ಯಾಯ ಮಂಡಳಿಯಲ್ಲಿ ನಿ.ಪಿ.5 ರಂತೆ ಒಂದೇ ಅರ್ಜಿ ಸಲ್ಲಿಸಿರುತ್ತಾರೆ. ನಿ.ಡಿ. 1 ರ ಬಗ್ಗೆ ನನಗೆ ವ್ಯಯಕ್ತಿಕ ಮಾಹಿತಿ ಇರುವುದಿಲ್ಲ.

2. ಭೂ ನ್ಯಾಯ ಮಂಡಳಿಯ ಸಮಕ್ಷಮ ನನ್ನ ತಂದೆಯವರು ಹಾಜರಾಗಿ ಹೇಳಿಕೆ ಕೊಟ್ಟಿದ್ದು ಅದು ಸತ್ಯವಾಗಿರುತ್ತದೆ. ದಾವಾ ಎ ಶೆಢ್ಯೂಲ್ ಆಸ್ತಿಗೆ ಸಂಬಂಧಪಟ್ಟಂತೆ 1967-1968 ಇಸವಿಯಿಂದ 1978-79 ನೇ ಸಾಲಿನ RTC/ನಿ.ಪಿ.8 ರಿಂದ 10 ರ ದಾಖಲೆಯಲ್ಲಿ ನಮೂದಿಸಿರುವ ವಿಚಾರ ಸರಿ ಇರುತ್ತದೆ. ಗುಲ್ವಾಡಿ ಗ್ರಾಮದ ಸರ್ವೆ ನಂಬರ್ 182 ವಿಸ್ತೀರ್ಣ 84 ಸೆಂಟ್ಸ್ ಜಾಗ ವಾದಿಯ ಮೂಲಗೇಣಿ ಆಸ್ತಿಯಾಗಿತ್ತು. ಸದರಿ ಮೂಲಗೇಣಿ ಆಸ್ತಿಯ ಬಾಬ್ತು ಮೂಲಗೇಣಿ ದಸ್ತಾವೇಜು ವಾದಿ ಮತ್ತು ಹಿಂದಿನ ದಣಿ ಸುಬ್ಬಕ್ಕ ಶೆಡ್ತಿಯವರ ನಡುವೆ ಆಗಿತ್ತು. ಆ ಆಸ್ತಿಅವರ ಸ್ವಯಾರ್ಜಿತ ಇಚ್ಛಾ ಸ್ವಾಧಿನ ಹಕ್ಕಾಗಿರುತ್ತದೆ ಎಂದರೆ ಸರಿ.

3. ಆ ಆಸ್ತಿಯ ಬಾಬ್ತು ಸದರಿ ಮೂಲಗೇಣಿ ದಸ್ತಾವೇಜನ್ನು ಪಡೆದು ಪರಿಶೀಲಿಸಲು ಪ್ರಯತ್ನಿಸಿರುವುದಿಲ್ಲ. ನಿ.ಡಿ. 4 ರಿಂದ 6 ರ ದಾಖಲೆಯನ್ನು ಅನಗತ್ಯವಾಗಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ. 7 ರಿಂದ 13 ರ ದಾಖಲೆಗಳ ದಾವೆ ಹಾಗೂ ಮೇಲ್ಮನವಿಯಲ್ಲಿ ನಾನು ಪಕ್ಷಗಾರನಿರುವುದಿಲ್ಲ.ದಾವೆಯ ಬಗ್ಗೆ ಮಾಹಿತಿ ತಿಳಿದುಕೊಂಡಿರುತ್ತೇನೆ. ನನ್ನ ತಂದೆ/1 ನೇ ವಾದಿ ಹಾಗೂ 3 ನೇ ಪ್ರತಿವಾದಿ ಮೊದಲು ಬಹಳ ಆತ್ಮೀಯವಾಗಿದ್ದರು. ನನ್ನ ತಂದೆ 3 ನೇ ಪ್ರತಿವಾದಿ ಪರ ಕರಾರು ಹಾಗೂ ಪತ್ರ

ಮಾಡಿಕೊಟ್ಟಿರುತ್ತಾರೆ. ಆ ಕರಾರು ತಿಂಗಳ ಬಾಡಿಗೆ ಕರಾರು ಅಲ್ಲ, ಆಸ್ತಿ ಮಾರಾಟ ಕರಾರು ಆಗಿತ್ತು. 3 ನೇ ಪ್ರತಿವಾದಿಯವರು ಕರಾರು ಪತ್ರ, ಜಿ ಪಿ ಎ ಆಧರಿಸಿಕೊಂಡು 5 ನೇ ಪ್ರತಿವಾದಿ , 6 ನೇ ಪ್ರತಿವಾದಿಗೆ ಕ್ರಯ ಪತ್ರ ಮಾಡಿಕೊಟ್ಟಿದ್ದರು.

4. ಕ್ರಯ ಪತ್ರ ಆದ ನಂತರ ನನ್ನ ತಂದೆಗೆ ಮತ್ತು 3 ನೇ ಪ್ರತಿವಾದಿಗೆ ಮನಸ್ತಾಪ ಉಂಟಾಗಿರುತ್ತದೆ. ನನ್ನ ತಂದೆಗೆ ಗೊತ್ತಿಲ್ಲದಂತೆ ದಾಖಲೆಗಳನ್ನು ಮಾಡಿಕೊಂಡಿರುತ್ತಾರೆ ಎಂದು OS 10/2012 ಹಾಗೂ 15/2012 ರಂತೆ ದಾವೆ ಸಲ್ಲಿಸಿರುತ್ತಾರೆ. ನಿಡಿ. 7 ರಿಂದ 13 ರ ದಾಖಲೆಗಳಲ್ಲಿ ಈ ದಾವೆಯ ವಾದಿ ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ. ಆ ದಾವೆಯಲ್ಲಿ ಶೇಖ್ ಬ್ಯಾರಿಯವರ ಗೇಣಿ ಆಸ್ತಿಯಾ ಅಥವಾ ಅಬ್ದುಲ್ ಖಾದರ್ ಗೇಣಿ ಆಸ್ತಿಯಾ ಎಂಬುದರ ಬಗ್ಗೆ ದಾಖಲೆ ಕೊಟ್ಟಿರುವುದಿಲ್ಲ. ಆ ದಾವೆಯಲ್ಲಿ ನಿ.ಪಿ. 5, 7,8 ರಿಂದ 11 ರ ದಾಖಲೆಯನ್ನು ಹಾಜರು ಪಡಿಸದೇ ಇರಲು ಕಾರಣ ಏನೆಂದರೆ ಸಾಕ್ಷಿ ಹಾಜರು ಪಡಿಸಿರುತ್ತೇವೆ ಎಂದು ನುಡಿಯುತ್ತಾರೆ. ಆ ದಾವೆಯನ್ನು 3 ನೇ ಪ್ರತಿವಾದಿ ಫೋರ್ಜರಿ ಮಾಡಿದ್ದಾರೆ ಎಂದು ದಾಖಲಿಸಿರುತ್ತಾರೆ. ಪ್ರತಿವಾದಿ 1 ರವರ ತಂದೆಯ ಆಸ್ತಿ ಅಥವಾ ಸ್ವಂತ ಆಸ್ತಿಯಾ ಎಂಬುದರ ಬಗ್ಗೆ ಅಲ್ಲ ಎಂದು ನುಡಿಯುತ್ತಾರೆ.

ಈ ಸಂದರ್ಭದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಮೂಂದೂಡಲಾಯಿತು

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ